ಪುಸ್ತಕ ವಿಮರ್ಶೆ

# ಅನೇಕಾರ್ಥ

ಡಾ. ಶ್ರೀಶೈಲ ಗೋಲಗೊಂಡ



# ANEKARTHA

(A Collection of Critical Articles)

*by*

**Dr. Shreeshail Golagond**
Assistant Professor
VMKSR Vastrad Arts,
Science & V.S.Bellihal
Commerce College
Hungund 587 118
Bagalkot Dist.
Cell:99804 00421
shreeshaila1970@gmail.com

*Published by*

**Savinaya Prakashana**
Om Shantinagar
Hungund 587 118
Bagalkot Dist.

Copies: 1000

Pages: xx+128 **Price 150/-**

First Impression 2021

ISBN: 978-93-5426-890-8

Paper used: 70Gsm N.S.Maplitho

© ಲೇಖಕರು

**ಮುಖಪುಟ: ಕೆ.ಕೆ.ಮಕಾಳಿ**

**ಪ್ರಕಾಶಕರು**
ಸವಿನಯ ಪ್ರಕಾಶನ
ಓಂ ಶಾಂತಿನಗರ
ಹುನಗುಂದ ೫೮೭ ೧೧೮
ಬಾಗಲಕೋಟೆ ಜಿಲ್ಲೆ

ಪ್ರತಿಗಳು: ೧೦೦೦

ಬೆಲೆ: ೧೫೦/-

**ಅಕ್ಷರ ಸಂಯೋಜನೆ**
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ೫೮೩ ೨೭೬
ಸಂಚಾರಿ ೯೪೪೮೧ ೬೭೯೦

**ಮುದ್ರಣ**
ರೀಗಲ್ ಪ್ರಿಂಟ್ ಸರ್ವೀಸ್, ಬೆಂಗಳೂರು



ಹುನಗುಂದ ವಿಜಯ ಮಹಾಂತೇಶ ಪದವಿ ಕಾಲೇಜಿನಲ್ಲಿ ಆಂಗ್ಲ ವಿಷಯದ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಶ್ರೀಶೈಲ ಆರ್.ಗೋಲಗೊಂಡ ಕಳೆದ ಒಂದು ದಶಕದಲ್ಲಿ ವಿಮರ್ಶೆ, ಸಂಶೋಧನೆ ಮತ್ತು ಕತೆಗಾರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಿತರಾದವರು. ಬರಹವನ್ನು ಧ್ಯಾನದಂತೆ ರೂಢಿಸಿಕೊಂಡಿರುವ ತಮ್ಮ ಬರಹದ ಒಡಲಲ್ಲಿ ಗ್ರಾಮೀಣ ಬದುಕಿನ ಅನೇಕ ಸಂಘರ್ಷ ಮತ್ತು ತಲ್ಲಣಗಳನ್ನು ಚಿತ್ರಿಸಿದ್ದಾರೆ. ಅದಕ್ಕೆ ಸಾಕ್ಷಿ ಕೆಲವು ವರ್ಷಗಳ ಹಿಂದೆ ಬಂದ 'ದ್ಯಾಮ್ರ ಯಮ್ನವ್ವ ಮತ್ತು ಇತರ ಕತೆಗಳು. ಬಸವಣ್ಣ ಮತ್ತು ಯೆಮರ್ಸನ್ ಎಂಬ ವಿಷಯದ ಮೇಲೆ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ.

ನಿಧಾನಕ್ಕೆ ಈ ಭಾಗದಲ್ಲಿ ವಿಮರ್ಶಾ ಕ್ಷೇತ್ರದಲ್ಲಿ ಹೆಸರು ಮಾಡುತ್ತಿರುವ ಹೊಸ ತಲೆಮಾರಿನ ಲೇಖಕರಲ್ಲಿ ಪ್ರಮುಖರಾಗಿ ಗಮನ ಸೆಳೆಯುತ್ತಾರೆ. ಅನೇಕ ವಿದ್ವತ್ ಕೃತಿಗಳಲ್ಲಿ ಹತ್ತಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ಕನ್ನಡ ನಾಟಕಗಳಲ್ಲಿ ಹೊಸ ನೋಟಗಳನ್ನು ಕಾಣುವ ಇವರು ಕಾರ್ನಾಡರ ಹಯವದನ ಮತ್ತು ತುಘಲಕ್ ನಾಟಕಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಎಂಬ ವಿಷಯದಲ್ಲಿ ಎಂ.ಫಿಲ್ ಪದವಿಯನ್ನೂ ಗಳಿಸಿದ್ದಾರೆ.

ಪ್ರಸ್ತುತ ಅನೇಕಾರ್ಥ ಕೃತಿ ವಿಮರ್ಶೆಯ ಹತ್ತು ಲೇಖನಗಳನ್ನು ಒಳಗೊಂಡಿದೆ. ಒಂದು ಕೃತಿಯನ್ನು ಹೊಸ ಹೊಸ ಆಲೋಚನಾ ಕ್ರಮದಲ್ಲಿ ನೋಡಿದರೆ ಸಿಗುವ ಫಲಿತಗಳೇ ಬೇರೆ. ಆ ಕಾರ್ಯ ಇಲ್ಲಿ ಆಗಿದೆ. ಕೃತಿಯನ್ನು ಒಬ್ಬ ವಿಮರ್ಶಕ ಹೇಗೆ ನೋಡಬಹುದು, ಅದರ ಮೂಲ ಆಶಯ ಏನು ಎಂಬುದನ್ನು ಸೂಕ್ಷ್ಮವಾಗಿ ಈ ಪುಸ್ತಕದಲ್ಲಿ ಗುರುತಿಸಿದ್ದಾರೆ.

ಗಿರೀಶ ಕಾರ್ನಾಡರು ತಮ್ಮ ಬಹಳಷ್ಟು ನಾಟಕಗಳಲ್ಲಿ ಸಂಪ್ರದಾಯಕ್ಕೆ ಆಧುನಿಕತೆಯನ್ನು ಮುಖಾಮುಖಿಗೊಳಿಸುತ್ತಾರೆ. ಪಾತ್ರ, ಸನ್ನಿವೇಶ, ವಿನ್ಯಾಸ, ತಂತ್ರ ಹಾಗೂ ಸಂಭಾಷಣೆಗಳ ಮೂಲಕ ಮರುಸೃಷ್ಟಿ ಮಾಡುತ್ತಾರೆ. ಆ ಮೂಲಕ ಆಧುನಿಕತೆಗೆ ನಮ್ಮ ಪುರಾಣ, ಐತಿಹಾಸಿಕ ಘಟನೆಗಳು ಮೊನಚಾದ ಸಂಭಾಷಣೆ ಮತ್ತು ವಿನ್ಯಾಸದಿಂದ ಎದಿರುಗೊಳ್ಳುತ್ತವೆ ಎಂಬ ವಿಷಯವನ್ನು ಲೇಖಕರು ಬಹು ದೀರ್ಘವಾಗಿ ಚರ್ಚಿಸಿದ್ದಾರೆ.

ಗ್ರಾಮೀಣ ಹಿನ್ನೆಲೆಯಿಂದ ಬಂದು ಇಂಗ್ಲಿಷ ಸಾಹಿತ್ಯ ಮತ್ತು ಜಗತ್ತಿನ ವಿವಿಧ ಭಾಷೆಗಳಲ್ಲಿ ರಚನೆಗೊಳ್ಳುವ ಕೃತಿಗಳ ಓದಿನ ಹರವು ಪಡೆದಿರುವ ಇವರು ಭಾರತೀಯ ಪರಂಪರೆಯ ಮೂಲನೆಲೆಯಲ್ಲಿ ಪಾಶ್ಚಾತ್ಯ ಮೀಮಾಂಸೆಯ ಮೂಸೆಯಲ್ಲಿ ಕೃತಿ ಅವಲೋಕಿಸುವ ಕ್ರಮ ಸ್ವಾಗತಾರ್ಹ.

ISBN 978-93-5426-890-8
9 789354 268908

■ ಎಸ್ಕೆ ಕೊನೆಸಾಗರ